ತಾರೀಖು 16ನೆ ಜನವರಿ 1907.

ನಂ. 5425—ಮೆಡಿಕಲ್ 151-06, ಮಿ॥ ಪಿ. ಚಂಗಲರಾಯ ಪೊವಲಿಯಾರ್‌ರವರು ಆನರೆರಿ ಅಸಿಸ್ಟೆಂಟ್ ಸರ್ಜನುಗಳ 4ನೆ ತರಗತಿಯಿಂದ 3ನೆ ತರಗತಿಗೆ ಬಡತಿ ಮಾಡಲ್ಪಟ್ಟಿರುತ್ತಾರೆ.

ತಾರೀಖು 16ನೆ ಜನವರಿ 1907.

ನಂ. 6433—Edn. 198-06-3, ಮೈಸೂರು ಸೇವೆಯ ವಿದ್ಯಾಭ್ಯಾಸದ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್ ಮಿ॥ ಎಚ್. ಜಿ. ಭಾಭಾ ಯವರಿಗೆ, 1906ನೆ ಇಸವಿ ಜೂನ್ 12ನೆ ತಾರೀಖಿನ 12736—ಏಜ್ಯೂ. 350-05-3ನೆ ನಂಬರಿನ ಸರ್ಕಾರಿ ಇಸ್ತಿಹಾರ್‌ನಾಮೆಯಲ್ಲಿ, ಮೂರುತಿಂಗಳು ಪ್ರಿವಿಲೀಜು ರಜಾವಿನ ಜತೆಗೆ ಕೊಡಲ್ಪಟ್ಟ ನಾಲ್ಕು ತಿಂಗಳು ಫರ್ಲೋ ರಜಾವನ್ನು 1907ನೆ ಇಸವಿಯ ಫೆಬ್ರವರಿ ಆಖೈರುವರೆಗೆ ಇದರಿಂದ ಹೆಚ್ಚಿಸಿ ಇದೆ; ಸದರಿ ಕಾಲದಲ್ಲಿ ಅಥವಾ ಬೇರೆ ಹುಕುಂ ಕೊಡುವ ವರೆಗೆ, ಆಗಲೇ ಹುಕುಂ ಮಾಡಲ್ಪಟ್ಟಂತೆ ಬದಲಿ ಏರ್ಪಾಡುಗಳು ನಡೆದುಕೊಂಡು ಬರತಕ್ಕದ್ದು.

ತಾರೀಖು 18ನೆ ಡಿಸೆಂಬರ್ 1906.

ನಂ. 5247-ಮ್ಯೂ. 163-06-4, ಸ್ಯ 1894ನೆಯ ಜರ್ಮದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಶನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ:—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ, ಎಂದರೆ, ಬೆಂಗಳೂರು ಸಿಟಿ ಬಸವನಗುಡಿಯ ಬಡ ವಣಿಗಾಗಿ ಅವಶ್ಯಕವಾಗಿದೆ.

ಡಿಸ್ಟ್ರಿಕ್ಟು	ತಾಲ್ಲೂಕು	ಹೋಬಳಿ	ಗ್ರಾಮ.	ಖಾತೇದಾರನ ಹೆಸರು.	ಸರ್ವೆ ನಂಬರ್.	ಇನಾಮು ಅಥವಾ ಸರ್ಕಾರಿ.	ಈಗ ಸರಕಾರಕ್ಕೆ ಬೇಕಾಗಿರುವ ಜಮೀನಿನ ವಿಸ್ತೀರ್ಣ.	ಕಂದಾಯ.	ಚತುರ್ಗಡಿ.			
									ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಬೆಂಗಳೂರು	ಬೆಂಗಳೂರು	ಬೆಗ್ಗ	ಉಪ್ಪಾರಪೇಟೆ	ಶಾನುಭೋಗ ರಾಮಯ್ಯ	1	ಇನಾಮು	ಎ ಗು 3 20	ರೂ. ಆ. 5 10	ಈ ಸರ್ವೆ ನಂಬರಿನ ಉಳಿದ ಭಾಗ	ದಾ॥	ಉಪ್ಪಾರಪೇಟೆ ಗ್ರಾಮ	ಸರ್ವೆ 2ನೆ ನಂಬರು.

ತಾರೀಖು 22ನೆ ಡಿಸೆಂಬರು 1906.

ನಂ. ರೆ. 6282—ಲ್ಯಾ. ರೆ. 345—06—2, ಹಾಸನ ಡಿಸ್ಟ್ರಿಕ್ಟಿನ ಹೋಬಳಿಗಳ ಹೊಸ ಏರ್ಪಾಡಿನಲ್ಲಿ ಕೆಲವು ಬದಲಾವಣೆಗಳನ್ನು ಮಾಡುವ 1906ನೆ ಇಸವಿಯ ಜನವರಿ 25ನೆ ತಾರೀಖಿನ, ರೆ. 10120—ಲ್ಯಾ. ರೆ. 380—05—4 ನಂಬರಿನ ಪ್ರಕಟನೆಯಲ್ಲಿ ಅರಸೀಕೆರೆ ತಾಲ್ಲೂಕಿನ ಅರಸೀಕೆರೆ ಹೋಬಳಿಗೆ ರಂಗಪುರವೆಂಬ ಹೆಸರಿನ ಮತ್ತೊಂದು ಕಾವಲನ್ನು ಸೇರಿಸಬೇಕೆಂದು ಮೈಸೂರು ಶ್ರೀಮರ್ಸ ಮಹಾರಾಜರವರ ಸರ್ಕಾರದವರು ಅಪ್ಪಣೆ ದಯಪಾಲಿಸಿರುತ್ತಾರೆ.

ತಾರೀಖು 7ನೆ ಜನವರಿ 1907.

ನಂ. ಆರ್. 6568—ಎಲ್. ಆರ್. 252—06—6, 1906ನೆಯ ಇಸವಿಯ ನವಂಬರ್ 29ನೆ ತಾರೀಖಿನ ಆರ್. 5556—ಎಲ್. ಆರ್. 252—06—4ನೆ ನಂಬರಿನ ಸರ್ಕಾರಿ ಇಸ್ತಿಹಾರ್‌ನಾಮೆಯಲ್ಲಿ ಹುಕುಂ ಮಾಡಿದಂತೆ ತಾಲ್ಲೂಕುಗಳನ್ನು ಸಬ್ ಡಿವಿಜನ್‌ಗಳಾಗಿ ಪುನರ್ವಿಮರ್ಶೆಯಿಂದ ಗುಂಪುಕೂಡಿಸುವುದು, ಚಿತ್ರದುರ್ಗ ಡಿಸ್ಟ್ರಿಕ್ಟಿನ ವಿಷಯದಲ್ಲಿ, ಸದರಿ ಇಸ್ತಿಹಾರ್‌ನಾಮೆಯಲ್ಲಿ ಹುಕುಂ ಮಾಡಿದಂತೆ 1907ನೆ ಇಸವಿಯ ಜೂಲೈ ಮೊದಲನೆ ತಾರೀಖಿಗೆ ಬದಲಾಗಿ ಈ ಕೂಡಲೆ ಜಾರಿಗೆ ತರಲ್ಪಡತಕ್ಕದ್ದು.

ತಾರೀಖು 5ನೆ ಜನವರಿ 1907.

ನಂ. ಆರ್. 6519—ಎಲ್. ಎಸ್. 12-06-3, 1888ನೆ ಇಸವಿಯ 4ನೆ ನಂಬರ್ ರೆಗ್ಯುಲೇರ್ಷ ಲ್ಯಾಂಡ್ ರೆವಿನ್ಯೂ ಕೋಡಿನ ನಿಯಮಗಳ ವೇರೆಗೆ ಚಿತ್ರದುರ್ಗದ ಡಿಸ್ಟ್ರಿಕ್ಟ್ ವಿಲ್ಲಕಾಲ್ಮರು ತಾಲ್ಲೂಕಿನ ಈ ಕೆಳಗೆ ನಮೂದಿಸುವ ಗ್ರಾಮಗಳಿಗೆ ರಿವಿಜ್ ಸೆರ್ವೆ ಸೆಟ್ಲ್‌ಮೆಂಟ್ ಆಗಬೇಕೆಂದು ಹುಕುಂ ಆದ ಪ್ರಯುಕ್ತ, ಸದರಿ ಕೋಡಿನ 112ನೆ ಪ್ರಕರಣದಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವುದರಲ್ಲಿ, ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು ಸದರಿ ಸೆಟ್ಲ್‌ಮೆಂಟಿಗೆ ಅನುಗುಣವಾಗಿ ವಿಧಿಸಿದ ಕಂದಾಯವು 1907—1908ನೆ ರೆವಿನ್ಯೂ ಸಾಲಿನಿಂದ ಮೊದಲುಗೊಂಡು 1936—1937ನೆ ರೆವಿನ್ಯೂ ಸಾಲಿನ ಆಖೈ

ರುವರೆಗೆ ಆಗುವ 30 ವರ್ಷಗಳ ಕಾಲದವರೆಗೆ ನಿಶ್ಚಿತವಾಗಿರತಕ್ಕದ್ದೆಂದು ಪ್ರಸಿದ್ಧ ಪಡಿಸಲು ಹುಕುಂ ಪಯಪಾಲಿಸಿರುತ್ತಾರೆಂದು ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಕಟಿಸಲ್ಪಟ್ಟಿರುತ್ತದೆ.—

ಹಿಂದಿನ ತಾಲ್ಲೂಕು	ಈಗಿನ ತಾಲ್ಲೂಕು	ನಂಬ್ರ	ಗ್ರಾಮಗಳ ಹೆಸರು	ಹಿಂದಿನ ತಾಲ್ಲೂಕು	ಈಗಿನ ತಾಲ್ಲೂಕು	ನಂಬ್ರ	ಗ್ರಾಮಗಳ ಹೆಸರು
1	2	3	4	1	2	3	4
ಜೊಳಕಾಲ್ಮಲ್ಲಿ	ಜೊಳಕಾಲ್ಮಲ್ಲಿ	1	ನಾಗಸಂದ್ರ	ಜೊಳಕಾಲ್ಮಲ್ಲಿ	ಜೊಳಕಾಲ್ಮಲ್ಲಿ	47	ಮುತ್ತಿಗಾರಹಳ್ಳಿ
		2	ಸಿದ್ದಾಪುರ			48	ಮಾರಮ್ಮನಹಳ್ಳಿ
		3	ದೇವಸಮುದ್ರ			49	ದುಪ್ಪಿ
		4	ರಾಂಪುರ			50	ಮಾಚೇನಹಳ್ಳಿ
		5	ಕೆರೆಕೊಂಡಾಪುರ			51	ವೀರಾಪುರ
		6	ಬೊಮ್ಮಗಟ್ಟ			52	ಗಾರಸಮುದ್ರ
		7	ಗವರಿಪುರ			53	ಹೆರೂರು
		8	ಜಂಬಲಮಲ್ಲಿ			54	ಬೈರಾಪುರ
		9	ಪಕ್ಕರ್ತಿ			55	ಕಾಟನಾಯಕನಹಳ್ಳಿ
		10	ನಲ್ಲಾರಡ್ಡಿಕೊಂಡಾಪುರ			56	ಪೋಚಳಾಪುರ
		11	ಕೀರೆಕೊಳ			57	ಬಸಾಪುರ
		12	ಬೊಮ್ಮದೇವರಹಳ್ಳಿ			58	ತಿಮ್ಮಲಾಪುರ
		13	ಸಂತೆಗುಡ್ಡ			59	ದೊಡ್ಡೂರು
		14	ಬಾಂಡ್ಯಾವಿ			60	ಉರತಲು
		15	ಕೃಷ್ಣರಾಜಪುರ			61	ಪೆನ್ನಮ್ಮರಹಳ್ಳಿ
		16	ಕೆಳಗಿನಕಣವೆ			62	ವಿಟಲಾಪುರ
		17	ಮೇಲಿನಕಣವೆ			63	ಕರಡಿಹಳ್ಳಿ
		18	ಮೊಳಕಾಲ್ಮುರು			64	ಕಣ್ಣಿಕಾಪ್ಪ
		19	ಹಾನಗಲ್ಲು			65	ಹೊಸನಾಗಲಪುರ
		20	ಗುಂಡಲೂರು			66	ಎರ್ರೇನಹಳ್ಳಿ
		21	ಬೊಮ್ಮಗೊಂಡನಕೆರೆ			67	ಜಾಲಿಪೇಟೆ
		22	ನೇರಲಹಳ್ಳಿ			68	ಚಿಲ್ಲದಗೊಂಡಿ
		23	ರಾಮನಾಗರ			69	ಯರ್ರೇನಹಳ್ಳಿ
		24	ಚಿಕ್ಕನಹಳ್ಳಿ			70	ಟುಮಟುಮಕನಹಳ್ಳಿ
		25	ಗುಡ್ಡದಹಳ್ಳಿ			71	ಮಠದಜೋಗಿಹಳ್ಳಿ
		26	ವೆಂಕಟಾಪುರ			72	ಅಯ್ಯನಹಳ್ಳಿ
		27	ಪೋಬ್ಬಾಪುರ			73	ಯರಪೋತಜೋಗಿಹಳ್ಳಿ
		28	ಮುರಡಿ			74	ಚಿಕ್ಕಮತಿ
		29	ಸಾವಿಕೆರೆ			75	ತುಪ್ಪದಕ್ಕನಹಳ್ಳಿ
		30	ತಿಮ್ಮನಹಳ್ಳಿ			76	ದೊಣೆತಮ್ಮನಹಳ್ಳಿ
		31	ರಾಜಾಪುರ			77	ಸೂರವ್ವನಹಳ್ಳಿ
		32	ಕೋನಾಪುರ			78	ಅಡವಿಮಲ್ಲಾಪುರ
		33	ಬೊಮ್ಮಕ್ಕನಹಳ್ಳಿ			79	ಹರವಿನದಿಡ್ಡಿ
		34	ಬುಡ್ಡೇನಹಳ್ಳಿ			80	ಪುರಬೋರನಹಳ್ಳಿ
		35	ಅಮಕುಂದಿ			81	ರಂಗಪ್ಪನದುರ್ಗ
		36	ಭಟ್ಟರಹಳ್ಳಿ			82	ಯರಜಿನ್ನೇನಹಳ್ಳಿ
		37	ಹಿರೇಕೆರೆಹಳ್ಳಿ			83	ಮಹಿಮನಹಟ್ಟಿ
		38	ಸಿದ್ದಯ್ಯನಕೋಟೆ			84	ಬೊಮ್ಮಲಿಂಗನಹಳ್ಳಿ
		39	ಚಿಕ್ಕಪೋಚಣ್ಣನಹಳ್ಳಿ			85	ತಳವಾರಹಳ್ಳಿ
		40	ಸೂಳೇನಹಳ್ಳಿ			86	ವಡೇರಹಳ್ಳಿ
		41	ರಾಯಪುರ			87	ಹೊಸಹಳ್ಳಿ
		42	ಸೋಮೇನಹಳ್ಳಿ			88	ಮಲ್ಲೆಹರವು
		43	ಕೋನಸಾಗರ			89	ಸಂಜೀವರಾಯನಕೋಟೆ
		44	ನೇತ್ರನಹಳ್ಳಿ			90	ಚಿನವಾಲದಗುಡ್ಡ
		45	ಕೊಂಡಲಹಳ್ಳಿ			91	ಕವುರದಕಾವಲು
		46	ಮೊಗಲಹಳ್ಳಿ				

ಬಿ.ಪೋಜೇಬ್ ಹುಕುಂ,
ಎ. ಕೆ. ಎನ್. ಚಂದ್ರಶೇಖರ ಐಯ್ಯರ್,
ಜನರಲ್ ಪರವಿನ್ಯೂ ಇಲಾಖೆಗಳ ಗವರ್ನ್‌ಮೆಂಟ್ ಸೆಕ್ರಟರಿ.